ದಿನಾಂಕಃ 07.03.2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.
ಪಾಟೀ ಸವಾಲು ಃ ಶ್ರೀ ಕೆ ಎನ್ ಎಸ್ ವಕೀಲರಿಂದ ಆರೋಪಿತನ ಪರವಾಗಿ ಃ

1. ಲೋಕಾಯುಕ್ತ ಕಛೇರಿಗೆ ಪ್ರತಿನಿಯೋಜನೆ ಮಾಡಿರಲಿಲ್ಲ, ಆದರೆ ಕಳುಹಿಸಿಕೊಟ್ಟರು. ತನಿಖಾಧಿಕಾರಿ ನಮ್ಮ ಮೇಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು, ಬರವಣಿಗೆ ಮೂಲಕ. ಲೋಕಾಯುಕ್ತ ಕಛೇರಿಯಲ್ಲಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಿ ಎಂದು ಲಿಖಿತ ಆದೇಶ ಕೊಟ್ಟಿಲ್ಲ. ನಾವು ಲೋಕಾಯುಕ್ತ ಕಛೇರಿಗೆ ಒಟ್ಟು ಎಷ್ಟು ಜನರಿದ್ದರು ಎಂದು ನಾನು ಎಣಿಸಲಿಲ್ಲ. ಪ್ರಾ.ಸಾ.1 ರವರ ದೂರು ಗಣಕೀಕರಿಸಲ್ಪಟ್ಟಿತ್ತು. ಪ್ರಾ.ಸಾ.1 ರವರಿಗೆ ಜಾಸ್ತಿ ಓದಲು ಬರೆಯಲು ಬರುವುದಿಲ್ಲ ಎಂದು ಅವರು ಹೇಳಿದ್ದರು. ಪ್ರಾ.ಸಾ.1 ಆಂಧ್ರದ ಮೂಲವಾಸಿ ಎಂದರೆ ನಿಜ. ಹಳೇ ಡಿಸಿ ಕಛೇರಿಗೆ ಅದೇ ದಿನ ಹೋದೆವು. ಆರೋಪಿಯ ಕಛೇರಿಯ ಒಳಗೆ ಬಾಬಣ್ಣ ಒಬ್ಬರೇ ಒಳಗೆ ಹೋದರು ಎಂದು ಹೇಳುವುದು ಸುಳ್ಳು. ನಾನು ಸಹ ಅವರ ಜೊತೆಗೆ ಒಳಗೆ ಹೋಗಿರುತ್ತೇನೆ. ಆರೋಪಿಗೆ ಹಣ ಕೊಟ್ಟ ನಂತರ ಪ್ರಾ.ಸಾ.4 ಹೊರಕ್ಕೆ ಹೋದರು, ನಾನು ಅಲ್ಲೇ ಇದ್ದೆನು. ಆ ಸಂದರ್ಭದಲ್ಲಿ ಆರೋಪಿಯ ಕಛೇರಿಯಲ್ಲಿ ಅವರ ಸಿಬ್ಬಂದಿಯವರು ಇದ್ದರು, ಅವರ ಹೆಸರು ನನಗೆ ಹೇಳಲಾಗುವುದಿಲ್ಲ. ಪ್ರಾ.ಸಾ.4 ಆರೊಪಿಗೆ ದುಡ್ಡು ಕೊಟ್ಟಿದ್ದನ್ನು ಅವರ ಸಿಬ್ಬಂದಿ ವರ್ಗದವರು ನೋಡಿದರೋ ಇಲ್ಲವೋ ಎಂದು ನನಗೆ ಹೇಳಲಾಗುವುದಿಲ್ಲ.

2. ಆರೋಪಿ ಟ್ರ್ಯಾಪ್ ಆಗಿತ್ತು ಎಂದು ಹೇಳಲಾದ ಕಾಲದಲ್ಲಿಯೇ ನಿವೃತ್ತ ನೌಕರ. ಗುತ್ತಿಗೆ ಆಧಾರದ ಮೇಲೆ ಅವರನ್ನು ಕೆಲಸಕ್ಕೆ ತೆಗೆದುಕೊಂಡಿದ್ದರು ಎಂದರೆ ನಿಜ. ಲೋಕಾಯುಕ್ತ ಅಧಿಕಾರಿಗಸಳು ಪ್ರಾ.ಸಾ.4 ರವಗರ ಸನ್ನೆಯ

ಆಧಾರದ ಮೇರೆಗೆ ಆರೋಪಿಯ ಕಛೇರಿಗೆ ಬಂದಾಗ ಆರೋಪಿಯ ಜೇಬಿನಲ್ಲಿ ಹಣ ಇರಲಿಲ್ಲ, ಸಾಕ್ಷಿ ಸ್ವತಃ ಹೇಳುತ್ತಾರೆ ಅವರ ಅಲ್ಮೇರಾದಲ್ಲಿ ಹಣ ಇತ್ತು ಎಂದು. ಅಲ್ಮೇರಾದಲ್ಲಿ ಲಂಚದ ಹಣದ ಜೊತೆ ಬೇರೆ ಹಣವೂ ಇತ್ತು. ಈಗ ಲಂಚದ ಹಣದ ಸಂಖ್ಯೆಯನ್ನು ದಾಖಲೆ ನೋಡದೇ ಹೇಳಲಾಗುವುದಿಲ್ಲ. ಅದೇ ರೀತಿ ಅಲ್ಮೇರಾದಲ್ಲಿ ಇದ್ದ ಬೇರೆ ಹಣದ ಸಂಖ್ಯೆಯನ್ನು ಹೇಳಲಾಗುವುದಿಲ್ಲ.

3. ಸರ್ವೆ ಕಛೇರಿಯಲ್ಲಿ ದಾಖಲೆಗಳನ್ನು ಪಡೆದುಕೊಳ್ಳಬೇಕಾದರೆ ಡಿಸ್ಪ್ಯಾಚ್ ವಿಭಾಗಕ್ಕೆ ಹೋಗಿ ಪಡೆದುಕೊಳ್ಳಬೇಕು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ಕಛೇರಿಯಲ್ಲಿ ಆರೋಪಿಯಲ್ಲದ ಬೇರೆ ವ್ಯಕ್ತಿ ಡಿಸ್ಪ್ಯಾಚ್ ವಿಭಾಗದಲ್ಲಿ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಡಿಸ್ಪ್ಯಾಚ್ ವಿಭಾಗದಲ್ಲಿ ದಾಖಲೆಯನ್ನು ಪಡೆದುಕೊಂಡಿದ್ದರೆ ಯಾರಿಗೆ ಕೊಟ್ಟಿದ್ದೇವೆ ಎಂದು ಅವರು ಸಹಿ ಪಡೆದುಕೊಳ್ಳುತ್ತಾರೆ ಎಂದರೆ ನಿಜ. ಪ್ರಾ.ಸಾ.4 ಸರ್ವೆ ಇಲಾಖೆಯ ಡಿಸ್ಪ್ಯಾಚ್ ವಿಭಾಗದಿಂದ ಸ್ಕೆಚ್ ನ ನಕಲನ್ನು ಪಡೆದುಕೊಂಡಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಆರೋಪಿಯಿಂದ ಪಡೆದುಕೊಂಡರು ಎಂದು. ಆರೋಪಿ ರವಾನೆ ವಿಭಾಗದಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ನಿಜ. ಆರೋಪಿ ಪ್ರಾ.ಸಾ.4 ರವರಿಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದು ಹೇಳುವುದು ಸುಳ್ಳು. ಅಲ್ಮೇರಾದಿಂದ ಹಣ ತೆಗೆದುಕೊಳ್ಳುವಾಗ ಭಾವಚಿತ್ರ ತೆಗೆದರೋ ಇಲ್ಲವೋ ಗಮನಿಸಿಲ್ಲ, ಆದರೆ ವೀಡಿಯೋ ಮಾಡಿರುತ್ತಾರೆ.

4. ನಾನು ಲೋಕಾಯಕ್ತ ಕಛೇರಿಗೆ ಹೋಗೇ ಇರಲಿಲ್ಲ, ನನಗೆ ಯಾವುದೇ ದೂರನ್ನು ಕೊಟ್ಟು ಓದಿಕೊಳ್ಳಲು ಹೇಳಿರಲಿಲ್ಲ, ಯಾವುದೇ ವ್ಯಕ್ತಿಯ ಪರಿಚಯವನ್ನು ನನಗೆ ಮಾಡಿಸಲಿಲ್ಲ, ನಂತರ ಲೋಕಾಯುಕ್ತ ಇನ್ ಸ್ಪೆಕ್ಟರ್ ಜೊತೆ ಹಳೇ ಜಿಲ್ಲಾಧಿಕಾರಿಗಳ ಕಛೇರಿಗೆ ನಾವು ಹೋಗಿಲ್ಲ ಎಂದು ಹೇಳುವುದು ಸುಳ್ಳು. ನನ್ನ ಸಮಕ್ಷಮ ಆರೋಪಿಗೆ ಪ್ರಾ.ಸಾ.4 ಹಣ ಕೊಟ್ಟಿಲ್ಲ ಎಂದು ಹೇಳುವುದು ಸುಳ್ಳು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಪಂಚನಾಮೆಗಳನ್ನು ನನ್ನ ಸಮಕ್ಷಮ ಮಾಡಿಲ್ಲ ಎಂದು ಹೇಳುವುದು ಸುಳ್ಳು. ಲೋಕಾಯುಕ್ತ ಅಧಿಕಾರಿಗಳ ಮಾತು ಕೇಳಿ ಎಲ್ಲಾ ಪಂಚನಾಮೆಗಳಿಗೂ ಸಹಿ ಮಾಡಿದ್ದೇನೆ ಎಂದು ಹೇಳುವುದು ಸುಳ್ಳು. ಆರೋಪಿಯ ಕಛೇರಿಯಲ್ಲಿ ಪಂಚನಾಮೆ ಮಾಡುವಾಗ ಅಕ್ಕಪಕ್ಕದವರು ಅದಕ್ಕೆ ಸಹಿ ಮಾಡಲಿಲ್ಲ. ಈ ಪ್ರಕರಣದಲ್ಲಿ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ಕೊಡುತ್ತಿದ್ದೇನೆ ಎಂದು ಹೇಳುವುದು ಸುಳ್ಳು. ಈ ರೀತಿಯ ಟ್ರ್ಯಾಪ್ ಪಂಚನಾಮೆಗಳಿಗೆ ನಾನು ಇದೊಂದೆ ಬಾರಿ ಹೋಗಿದ್ದಿದ್ದು. ಪೋಲೀಸರ ಜೊತೆ ನಾನು ಯಾವುದೇ ಪಂಚನಾಮೆಗೆ ಹೋಗಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.